**ಎಸ್.ಸಿ. ನಂ.10/2019**

**ದೋ.ಸಾ. :46 ಫ್ರಾ.ಸಾ. : 55**

ಸಾಕ್ಷಿಯ ಹೆಸರು : ಮಹೇಶ ಜಿ. ನಾಯ್ಕ

**ದಿನಾಂಕಃ 13-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ.ಎಲ್.ಎಸ್.ಕೆ ವಕೀಲರಿಂದಃ-**

5. 2015 ನೇ ಇಸವಿಯಲ್ಲಿ ನಾನು ಪೊಲೀಸ್ ಇಲಾಖೆಗೆ ನೇಮಕಗೊಂಡಿರುತ್ತೇನೆ. ನನ್ನ ತರಬೇತಿ ಅವಧಿಯು ಮುಗಿದ ನಂತರ ನನ್ನನ್ನು ಕಾರವಾರದ ನಗರ ಪೊಲೀಸ್ ಠಾಣೆಗೆ ನಿಯುಕ್ತಿಗೊಂಡಿರುತ್ತೇನೆ. ತನಿಖಾಧಿಕಾರಿಯು ನನ್ನನ್ನು ಈ ಪ್ರಕರಣದಲ್ಲಿ ಆರೋಪಿಯ ಭದ್ರತೆಗಾಗಿ ನೇಮಿಸಿದ ಬಗ್ಗೆ ಯಾವುದೇ ಲಿಖಿತ ದಾಖಲೆ ಇರುವುದಿಲ್ಲ. ದಿ.22-10-2018 ರಂದು ನಾನು ರಾತ್ರಿ ಪಾಳಿಯಲ್ಲಿ ಕೆಲಸ ಮಾಡಿರುತ್ತೇನೆ. ಮರುದಿನ ಬೆಳಿಗ್ಗೆ 7.00 ಗಂಟೆಗೆ ತನಿಖಾಧಿಕಾರಿಯಾದ ಚಾಸಾ-69 ರವರು ನನ್ನನ್ನು ಆರೋಪಿಯ ಭದ್ರತೆಗಾಗಿ ನೇಮಿಸಿರುತ್ತಾರೆ. ದಿ.23-10-2018 ರಂದು ಬೆಳಿಗ್ಗೆ 7.00 ಗಂಟೆಯ ಸಮಯದಲ್ಲಿ ಠಾಣೆಯಲ್ಲಿ 2 ನೇ ಆರೋಪಿ ಇದ್ದನು ಮತ್ತು ಆತನ ಭದ್ರತೆಗಾಗಿ ಸಿಬ್ಬಂದಿಯನ್ನು ನೇಮಿಸಿದ್ದರು. ಅದೇ ದಿನ ಸುಮಾರು ಬೆಳಿಗ್ಗೆ 8.15 ಗಂಟೆಗೆ 3 ನೇ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದರು. ಆತನನ್ನು ಕರೆದುಕೊಂಡು ಬಂದ ಸಿಬ್ಬಂದಿಯ ಹೆಸರು ನನಗೆ ಈಗ ನೆನಪಿಲ್ಲ. ಆ ದಿನ ಮೃತ ಪ್ರೇಮ್ ಕುಮಾರನ ಸಂಬಂಧಿಕರಾದ ಮೃತನ ಅಣ್ಣ ರಾಜೇಶ ಹಾಗೂ ಆತನ ಮಾವ ದಯಾನಂದ್ ಬೋಗಳೆ ರವರು ಠಾಣೆಗೆ ಬಂದಿದ್ದು, ಆಗ ಸಮಯ ಬೆಳಿಗ್ಗೆ ಸುಮಾರು 8.30 ಗಂಟೆಯಾಗಿತ್ತು. ಅವರು ಬರುವ ಮೊದಲು ತನಿಖಾಧಿಕಾರಿಯು 2 ಮತ್ತು 3 ನೇ ಆರೋಪಿತರನ್ನು ವಿಚಾರಣೆ ಮಾಡಿರುವುದಿಲ್ಲ. ಅವರು ಬಂದ ನಂತರ, ತನಿಖಾಧಿಕಾರಿಯ ಕೊಠಡಿಯಲ್ಲಿ ಆರೋಪಿತರನ್ನು ವಿಚಾರಣೆ ಮಾಡಿರುತ್ತಾರೆ. ಆರೋಪಿತರ ವಿಚಾರಣೆಯ ಕಾಲಕ್ಕೆ ಸದರಿ ಕೊಠಡಿಯಲ್ಲಿ ತನಿಖಾಧಿಕಾರಿಗಳು, 2 ಮತ್ತು 3 ನೇ ಆರೋಪಿತರು, ಮೃತ ಪ್ರೇಮ್ ಕುಮಾರನ ಸಂಬಂಧಿಕರು ಹಾಗೂ ಭದ್ರತೆಗಾಗಿ ನೇಮಿಸಿದ ಪೊಲೀಸ್ ಸಿಬ್ಬಂದಿಗಳು ಇದ್ದರು.

6. ತನಿಖಾಧಿಕಾರಿಯು ಮೊದಲಿಗೆ 2 ನೇ ಆರೋಪಿಯನ್ನು ವಿಚಾರಣೆ ಮಾಡಿ, ನಂತರ 3 ನೇ ಆರೋಪಿಯನ್ನು ವಿಚಾರಣೆ ಮಾಡಿರುತ್ತಾರೆ. ಸದರಿ ವಿಚಾರಣೆಯನ್ನು ಸುಮಾರು 9.15 ಗಂಟೆಯವರೆಗೆ ಮಾಡಿರುತ್ತಾರೆ. ಆ ಸಮಯದಲ್ಲಿ ಆರೋಪಿತರು ನೀಡಿದ ಸ್ವ-ಖುಷಿ ಹೇಳಿಕೆಯನ್ನು ಯಾರು ಬರೆದುಕೊಂಡರು ಎಂದು ನನಗೆ ಈಗ ನೆನಪಿಲ್ಲ. ಆ ದಿನ ಮೃತ ಪ್ರೇಮ್ ಕುಮಾರನ ಸಂಬಂಧಿಕರು ಯಾರೂ ಸಹ ಠಾಣೆಗೆ ಬಂದಿರಲಿಲ್ಲ, ತನಿಖಾಧಿಕಾರಿಯು 2 ಮತ್ತು 3 ನೇ ಆರೋಪಿತರನ್ನು ಯಾವುದೇ ವಿಚಾರಣೆ ಮಾಡಿಲ್ಲ ಹಾಗೂ ಅವರ ಸ್ವ-ಖುಷಿ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ಘಟನಾ ಸ್ಥಳಕ್ಕೆ ಹೋಗುವಾಗ, ನಮ್ಮ ಠಾಣೆಯ ಸಿಬ್ಬಂದಿಗಳು ಒಟ್ಟು ಎಂಟು ಜನರು ಇದ್ದರು ಆದರೆ, ಡಿ.ಎ.ಆರ್. ವಿಭಾಗದ ಸಿಬ್ಬಂದಿಗಳ ಪೈಕಿ ವಾಹನ ಚಾಲಕನನ್ನು ಬಿಟ್ಟು, ಬೇರೆ ಎಷ್ಟು ಜನರು ಡಿ.ಎ.ಆರ್. ಸಿಬ್ಬಂದಿಗಳು ಇದ್ದರು ಎಂದು ನನಗೆ ಈಗ ನೆನಪಿಲ್ಲ. ಆ ದಿನ ಘಟನಾ ಸ್ಥಳಕ್ಕೆ ನಮ್ಮೊಂದಿಗೆ ಆ್ಯಂಬುಲೆನ್ಸ್ ನಲ್ಲಿ ಇಬ್ಬರು ವೈದ್ಯರು ಮತ್ತು ಇಬ್ಬರು ಸಹಾಯಕರು ಇದ್ದರು. ಆ ದಿನ ಡಿ.ಎ.ಆರ್. ವ್ಯಾನ್‌ನಲ್ಲಿ 2 ಮತ್ತು 3 ನೇ ಆರೋಪಿತರು ಹಾಗೂ ಅವರ ಭದ್ರತೆಗೆ ನೇಮಕಗೊಂಡ ಸಿಬ್ಬಂದಿಗಳು, ಇಬ್ಬರು ಪಂಚರು, ಮೃತನ ಸಂಬಂಧಿಕರು ಇದ್ದೆವು. ಸದರಿ ವ್ಯಾನ್ ನಲ್ಲಿ ನಾವು ಒಟ್ಟು 13 ಜನರು ಇದ್ದೆವು. ವ್ಯಾನ್ ನೊಂದಿಗೆ ಬಂದಿದ್ದ ಜೀಪ್ ನಲ್ಲಿ ತನಿಖಾಧಿಕಾರಿ, ಪಿ.ಎಸ್.ಐ. ಹಾಗೂ ಇಬ್ಬರು ಸಿಬ್ಬಂದಿಗಳು ಇದ್ದರು. ಘಟನಾ ಸ್ಥಳಕ್ಕೆ ಹೋಗುವಾಗ ಜೀಪ್ ಮುಂದುಗಡೆ ಇದ್ದು, ಅದರ ಹಿಂದೆ ವ್ಯಾನ್ ಹಾಗೂ ಆ್ಯಂಬುಲೆನ್ಸ್ ಇದ್ದವು.

7. ಠಾಣೆಯಿಂದ ಸದರಿ ಸ್ಥಳಕ್ಕೆ ನಾವು ಸುಮಾರು 50-60 ಕಿ.ಮೀ. ಕ್ರಮಿಸಿದ್ದೆವು ಹಾಗೂ ಸುಮಾರು ಎರಡು ಗಂಟೆಗಳ ಕಾಲ ಪ್ರಯಾಣಿಸಿರುತ್ತೇವೆ. ನಾವು ಹೋಗಿದ್ದ ವಾಹನಗಳು ಉಳವಿ ಚೆಕ್ ಪೋಸ್ಟ್ ವರೆಗೆ ಹೋಗಿದ್ದು, ಅಲ್ಲಿ ನಿಲ್ಲಿಸಿರುತ್ತೇವೆ. ಸದರಿ ಸ್ಥಳದಲ್ಲಿ ಸಿಮೆಂಟ್ ರಸ್ತೆಯೂ ಸಹ ಇರುತ್ತದೆ. ಸದರಿ ಸಿಮೆಂಟ್ ರಸ್ತೆಯು ಎಲ್ಲಿಯವರೆಗೆ ಇರುತ್ತದೆ ಎಂದು ನನಗೆ ಈಗ ನೆನಪಿಲ್ಲ. ಆನಂತರ ಉಳವಿ ಚೆಕ್ ಪೋಸ್ಟ್ ನಿಂದ ಮಣ್ಣಿನ ರಸ್ತೆಯು ಮೂಲಕ ಎರಡೂವರೆ ಕಿ.ಮೀ ನಡೆದುಕೊಂಡು ಹೋಗಿರುತ್ತೇವೆ ಹಾಗೂ ಸದರಿ ಮಣ್ಣಿನ ರಸ್ತೆಯು ನಾಲ್ಕೂವರೆಯಿಂದ ಐದು ಅಡಿ ಅಗಲದ ರಸ್ತೆಯಾಗಿತ್ತು. ಸದರಿ ಎರಡೂವರೆ ಕಿ.ಮೀ.ನ್ನು ನಡೆದುಕೊಂಡು ಕ್ರಮಿಸಲು ಸುಮಾರು 20 ನಿಮಿಷವಾಗಿರುತ್ತದೆ. ಸದರಿ ಮಣ್ಣಿನ ರಸ್ತೆಯಲ್ಲಿ ದ್ವಿಚಕ್ರ ವಾಹನಗಳು ಓಡಾಡಿದ ಕುರುಹುಗಳು ಕಂಡುಬಂದಿದ್ದು, ನಾಲ್ಕು ಚಕ್ರದ ವಾಹನಗಳು

ಓಡಾಡಿದ ಬಗ್ಗೆ ಕಂಡುಬಂದಿರುವುದಿಲ್ಲ. ಸದರಿ ಮಣ್ಣಿನ ರಸ್ತೆಯು ಅರಣ್ಯ ಇಲಾಖೆಯ ವಾಹನಗಳು ಸಂಚರಿಸಲು ಇದ್ದಂತಹ ರಸ್ತೆಯಾಗಿರುತ್ತದೆ. ಮಣ್ಣಿನ ರಸ್ತೆಯಲ್ಲಿ ಎರಡೂವರೆ ಕಿ.ಮೀ. ಕ್ರಮಿಸಿದ ನಂತರ ಕಾಲು ದಾರಿಯಲ್ಲಿ ಸುಮಾರು ಒಂದೂವರೆ ಕಿ.ಮೀ. ದೂರವನ್ನು ಸುಮಾರು 15 ನಿಮಿಷಗಳ ಕಾಲ ಕ್ರಮಿಸಿರುತ್ತೇವೆ.

8. ನಾವು ಸ್ಥಳಕ್ಕೆ ಹೋದ ನಂತರ ಸುಮಾರು 50 ಅಡಿ ದೂರದಿಂದ ಇಬ್ಬರೂ ಆರೋಪಿತರು ಶವ ಬಿದ್ದಿದ್ದ ಸ್ಥಳವನ್ನು ತೋರಿಸಿರುತ್ತಾರೆ. ಶವ ಬಿದ್ದ ಸ್ಥಳವು ಸ್ವಲ್ಪ ಇಳಿಜಾರಿನ ಪ್ರದೇಶವಾಗಿರುತ್ತದೆ. ನಾವು ಶವವನ್ನು ಸುಮಾರು 50 ಅಡಿ ದೂರದಿಂದ ನೋಡಿದಾಗ, ಸದರಿ ಪ್ರದೇಶವು ಗಿಡ-ಮರಗಳಿಂದ ಕೂಡಿದ ಪ್ರದೇಶವಾದ ಕಾರಣ, ಶವವು ಸ್ವಲ್ಪ ಕಾಣುತ್ತಿತ್ತು. ಠಾಣೆಯಿಂದ ಹೋದ ಎಲ್ಲರೂ ಸಹ, ಶವ ಬಿದ್ದ ಜಾಗಕ್ಕೆ ಹೋಗಿರುತ್ತೇವೆ. ಮೃತನ ಸಂಬಂಧಿಕರಾದ ರಾಜೇಶ ಮತ್ತು ದಯಾನಂದ ಬೋಗಳೆರವರು ಶವವನ್ನು ನೋಡಿ ಗುರುತಿಸಿರುತ್ತಾರೆ. ನಾವು ಶವದ ಬಳಿ ಹೋದಾಗ ಮಧ್ಯಾಹ್ನ ಸುಮಾರು 12.00 ಗಂಟೆಯಾಗಿತ್ತು. ಶವ ಪಂಚನಾಮೆಯನ್ನು ಯಾರು ಬರೆದರು ಎಂದು ನನಗೆ ಈಗ ನೆನಪಿಲ್ಲ. ಶವ ಪಂಚನಾಮೆಯ ನಂತರ ವೈದ್ಯರು ಮರಣೋತ್ತರ ಪರೀಕ್ಷೆಯನ್ನು ಎಷ್ಟು ಗಂಟೆಗೆ ಮಾಡಿದರು ಎಂದು ಈಗ ನನಗೆ ನೆನಪಿಲ್ಲ. ಆದಿನ ಸ್ಥಳದಲ್ಲಿ ಒಟ್ಟು ಐದು ಪಂಚನಾಮೆಗಳನ್ನು ಮಾಡಿರುತ್ತಾರೆ. ನಾನು ಶವವನ್ನು ನೋಡಿದಾಗ, ಶವವು ಭಾಗಶಃ ಕೊಳೆತಿರುತ್ತದೆ. ಶವದ ಯಾವ ಯಾವ ಭಾಗದಲ್ಲಿ ಹುಳುಗಳು ಇದ್ದವು ಎಂದು ನನಗೆ ಈಗ ನೆನಪಿಲ್ಲ. ಮರಣೋತ್ತರ ಪರೀಕ್ಷೆಯ ನಂತರ ವೈದ್ಯರು ಶವವನ್ನು ನಮ್ಮ ಸಿಬ್ಬಂದಿಯ ವಶಕ್ಕೆ ಕೊಟ್ಟಾಗ ಹಾಗೂ ಆನಂತರ ನಮ್ಮ ಸಿಬ್ಬಂದಿಗಳು ಶವವನ್ನು ಮೃತನ ಸಂಬಂಧಿಕರಿಗೆ ಹಸ್ತಾಂತರಿಸಿದಾಗ, ಎಷ್ಟು ಸಮಯವಾಗಿತ್ತು ಎಂದು ನನಗೆ ಈಗ ನೆನಪಿಲ್ಲ. ಶವ ಬಿದ್ದ ಸ್ಥಳದಲ್ಲಿಯೇ ಮರಣೋತ್ತರ ಪರೀಕ್ಷೆಯನ್ನು ಮಾಡಿರುತ್ತಾರೆ. ಆ ಸಮಯದಲ್ಲಿ ಮಳೆ ಬಿದ್ದ ಕಾರಣ, ಶವದ ಬಿದ್ದ ಸ್ಥಳದಲ್ಲಿ ಮತ್ತು ಅಕ್ಕ-ಪಕ್ಕದಲ್ಲಿ ರಕ್ತದ ಕಲೆಗಳು ಕಂಡುಬಂದಿರುವುದಿಲ್ಲ.

9. ಎಷ್ಟು ಭಾಗಗಳಿಂದ ಶವದ ಫೋಟೊ ತೆಗೆಯಲಾಗಿದೆ ಎಂದರೆ ಸಾಕ್ಷಿಯು, ಫೋಟೊ ತೆಗೆದದ್ದು ಮಾತ್ರ ಗೊತ್ತಿದ್ದು, ಯಾವ ಯಾವ ಭಾಗಗಳಿಂದ ಫೋಟೊಗಳನ್ನು ತೆಗೆಯಲಾಗಿದೆ ಎಂದು ನನಗೆ ಈಗ ನೆನಪಿಲ್ಲ. ಶವದ ಮೈಮೇಲೆ ಎಷ್ಟು ಗಾಯಗಳು ಇದ್ದವು ಎಂದು ನನಗೆ ಈಗ ನೆನಪಿಲ್ಲ. ಶವ ಬಿದ್ದ ಸ್ಥಳದಿಂದ ಪ್ರೇಮ್ ಕುಮಾರನ ಮೇಲೆ ಹಲ್ಲೆ ಮಾಡಿದ ಸ್ಥಳವು

ಸುಮಾರು 150 ಅಡಿ ದೂರ ಇತ್ತು ಹಾಗೂ ಕಣ್ಣಿಗೆ ಬಟ್ಟೆ ಕಟ್ಟಿದ ಸ್ಥಳವು ಸುಮಾರು 210 ಅಡಿ ಇತ್ತು. ಹಲ್ಲೆ ಮಾಡಿದ ಸ್ಥಳದಿಂದ ಶವ ಬಿದ್ದ ಸ್ಥಳದ ನಡುವಿನ ಜಾಗದಲ್ಲಿ ರಕ್ತ ಬಿದ್ದ ಕುರುಹುಗಳು ಕಂಡುಬಂದಿರುವುದಿಲ್ಲ. ಕಣ್ಣಿಗೆ ಬಟ್ಟೆ ಕಟ್ಟಿದ ಸ್ಥಳದಿಂದ ಹಲ್ಲೆ ಮಾಡಿದ ಸ್ಥಳ ಮತ್ತು ಅಲ್ಲಿಂದ ಶವ ಬಿದ್ದ ಸ್ಥಳವು ಗಿಡ–ಗಂಟಿಗಳಿಂದ ಕೂಡಿದ ಸ್ಥಳವಾಗಿತ್ತು. ಸದರಿ ಸ್ಥಳದಲ್ಲಿ ಮೈಕೈಗೆ ತರಚುವಂತಹ ಗಿಡ–ಗಂಟಿಗಳು ಇರಲಿಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಗಳು ಹಾಗೂ ಮರಣೋತ್ತರ ಪರೀಕ್ಷೆ ಎಲ್ಲವನ್ನೂ ಮುಗಿಸಿ, ಉಳವಿ ಅರಣ್ಯ ಚೆಕ್ ಪೋಸ್ಟ್ ಬಳಿ ಬಂದಾಗ ಸಂಜೆ ಸುಮಾರು 6.00 ಗಂಟೆಯಾಗಿತ್ತು. ಅಲ್ಲಿಂದ ಹೊರಟು ಕಾರವಾರ ಠಾಣೆಗೆ ಬಂದಾಗ ಸುಮಾರು 7.30–8.00 ಗಂಟೆಯಾಗಿತ್ತು. ಠಾಣೆಗೆ ಬಂದ ನಂತರ ನಾನು ಈ ಪ್ರಕರಣದಲ್ಲಿ ತನಿಖಾ ಸಹಾಯಕನಾಗಿ ಕೆಲಸ ಮಾಡಿಲ್ಲ.

10. 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯೊಂದಿಗೆ ಸೇರಿ ಸಂಚು ರೂಪಿಸಿ, ಕೃತ್ಯ ಎಸಗಿದ ಬಗ್ಗೆ ನನ್ನ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ, ನಾನು ಆರೋಪಿತರ ಭದ್ರತೆಗಾಗಿ ಸ್ಥಳಕ್ಕೆ ಹೋಗಿದ್ದು, ಅಲ್ಲಿ ತನಿಖಾಧಿಕಾರಿಗಳು ಪಂಚನಾಮೆಯನ್ನು ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–18 ಮತ್ತು 21 ಪಂಚನಾಮೆಗಳನ್ನು ತನಿಖಾಧಿಕಾರಿಗಳ ಸೂಚನೆ ಮೇರೆಗೆ ಬರೆದಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತಿನಂತೆ, ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

2 ಮತ್ತು 3 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್ ವಕೀಲರಿಂದಃ–**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್.ವಕೀಲರಿಂದಃ–**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ